# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1038
2) ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 20-08-2025
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ಕರಾವಳಿ ಜಿಲ್ಲೆಗಳಲ್ಲಿ (ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ) ಮೀನುಗಾರರ ದೋಣಿ ದುರಂತದಿಂದ ಎಷ್ಟು ಮೀನುಗಾರರ ಸಾವಾಗಿದೆ; (ತಾಲ್ಲೂಕುವಾರು ಸಂಪೂರ್ಣ ವಿವರ ಒದಗಿಸುವುದು); | ಕಳೆದ 5 ವರ್ಷಗಳಲ್ಲಿ ಕರಾವಳಿ ಜಿಲ್ಲೆಗಳಲ್ಲಿ ದೋಣಿ ದುರಂತದಿಂದ ಮೀನುಗಾರರು ಮರಣ ಹೊಂದಿದ ಪ್ರಕರಣಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಮೀನುಗಾರರ ಪ್ರಾಣಕ್ಕೆ ಕಂಟಕವಾಗುತ್ತಿರುವ ಅಳಿವೆ ಬಾಗಿಲು ನಿರ್ವಹಣೆ, ಹೂಳು ತೆಗೆಯುವುದು, ಬ್ರೇಕ್‌ವಾಟರ್ ವಿಸ್ತರಣೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಈ ಬಗ್ಗೆ ಸರ್ಕಾರ ಕೈಗೊಂಡಲ್ಲಿ ಸೂಕ್ತ ಕಾರಣಗಳೇನು; ಕೈಗೊಳ್ಳದಿರಲು ಕಾರಣಗಳೇನು; | ಆದ್ಯತೆ ಮೇರೆಗೆ ಮೀನುಗಾರಿಕೆ ಬಂದರುಗಳಲ್ಲಿ ಹೂಳು ತೆಗೆಯಲು ಕ್ರಮವಹಿಸಲಾಗುತ್ತಿದೆ. ಬ್ರೇಕ್‌ವಾಟರ್ ವಿಸ್ತರಣೆಯ ಅಗತ್ಯತೆ ಕಂಡುಬಂದಲ್ಲಿ Central Water and Power Research Station (CWPRS), ಪುಣೆ ಮತ್ತು Central Institute of Coastal Engineering & Fisheries (CICEF), ಬೆಂಗಳೂರು ರವರ ವರದಿಯನುಸಾರ ಬ್ರೇಕ್ ವಾಟರ್ ವಿಸ್ತರಣೆ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. |
| ಇ) | ಕಳೆದ 3 ವರ್ಷಗಳಲ್ಲಿ ಮೀನುಗಾರಿಕಾ ಬಂದರುಗಳಲ್ಲಿ ಡ್ರೆಜಿಂಗ್ ಕಾರ್ಯ ನಡೆಸಲಾಗಿದೆಯೇ; ನಡೆಸಿದ್ದರೆ ಯಾವೆಲ್ಲ ಬಂದರುಗಳಲ್ಲಿ ಡ್ರೆಜಿಂಗ್ ನಡೆಸಲಾಗಿದೆ (ವಿವರ ನೀಡುವುದು); ಸರ್ಕಾರಕ್ಕೆ ಕಾಲ ಕಾಲಕ್ಕೆ ಡ್ರೆಜಿಂಗ್ ಕಾರ್ಯ ನಡೆಸಲು ಇರುವ ಸಮಸ್ಯೆಯೇನು; | ರಾಜ್ಯದ ಮಂಗಳೂರು, ಮಲ್ಪೆ, ಗಂಗೊಳ್ಳಿ, ಭಟ್ಕಳ ಮತ್ತು ಕಾರವಾರ, ಬೈತಕೋಲ್ ಮೀನುಗಾರಿಕೆ ಬಂದರುಗಳಲ್ಲಿ ಮೀನುಗಾರಿಕೆ ದೋಣಿಗಳು ಸುಗಮವಾಗಿ ಮತ್ತು ವೇಗವಾಗಿ ಚಲಿಸಲು ಅನುಕೂಲವಾಗಿಸಲು ನ್ಯಾವಿಗೇಷನ್ ಚಾನಲ್‌ಗಳಲ್ಲಿ ಹಂತಹಂತವಾಗಿ ಹೂಳೆತ್ತುವ ಕಾಮಗಾರಿಯನ್ನು ರೂ.2000.00 ಲಕ್ಷಗಳಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-100 ಮೀಇಯೋ 2022 ದಿನಾಂಕ: 28-02-2023 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಅದರಂತೆ, ಸದರಿ ಹೂಳೆತ್ತುವ ಕಾಮಗಾರಿಗಳನ್ನು ಕರ್ನಾಟಕ ಜಲಸಾರಿಗೆ ಮಂಡಳಿ ಮೂಲಕ ಅನುಷ್ಠಾನಗೊಳಿಸಲಾಗಿದೆ.<br><br>ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಆಮದಳ್ಳಿ, ಬೇಲಿಕೆರೆ-ಹಾರವಾಡ ಮತ್ತು ತದಡಿ ಮೀನುಗಾರಿಕೆ ಬಂದರುಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕಾಮಗಾರಿಗಳನ್ನು ಪಿಎಂಎಂಎಸ್‌ವೈ (PMMSY) ಯೋಜನೆಯಡಿ ರೂ.1240.67 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ.<br><br>ರಾಜ್ಯ ಸರ್ಕಾರದ ಅನುದಾನದಿಂದ ರಾಜ್ಯದ 15 ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿ ಹೂಳೆತ್ತುವ ಕಾಮಗಾರಿಯ ಸಂಬಂಧ ಪೂರ್ವ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ಕಾಮಗಾರಿಗಳ ಪಟ್ಟಿ **ಅನುಬಂಧ-2**ರಲ್ಲಿ ನೀಡಲಾಗಿದೆ. ಸದರಿ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಲು ಕ್ರಮವಹಿಸ ಲಾಗಿರುತ್ತದೆ. |

| | | |
|---|---|---|
| ಈ) | ಪ್ರಸ್ತುತ ಮೀನುಗಾರರಿಗೆ ಏನೇನು ಸುರಕ್ಷಾ ಪರಿಕರಗಳನ್ನು ನೀಡಲಾಗುತ್ತಿದೆ; (ವಿವರ ಒದಗಿಸುವುದು); ಎಲ್ಲಾ ಮೀನುಗಾರರಿಗೆ ಜೀವರಕ್ಷಕ ಜಾಕೆಟ್‌ಗಳನ್ನು ಸರ್ಕಾರ ಏಕೆ ನೀಡಬಾರದು; ಎಲ್ಲಾ ಮೀನುಗಾರರಿಗೆ ಜಾಕೆಟ್ ಕಡ್ಡಾಯಗೊಳಿಸಲಾಗಿದೆಯೇ? | ಮೀನುಗಾರರಿಗೆ ನೀಡಲಾಗುತ್ತಿರುವ ಸುರಕ್ಷಾ ಪರಿಕರಗಳ ವಿವರ ಕೆಳಕಂಡಂತಿದೆ:-<br><br>• ಪ್ರಸ್ತುತ ಮೀನುಗಾರರು ಖರೀದಿಸಿದ ಲೈಫ್‌ಜಾಕೆಟ್, ಲೈಫ್ ಬಾಯ್ (Life Buoy) ಗಳಿಗೆ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಸಹಾಯಧನ ನೀಡಲಾಗುತ್ತಿದೆ.<br><br>• ಪ್ರಸ್ತುತ ಅನುದಾನದ ಲಭ್ಯತೆಗೆ ಅನುಗುಣವಾಗಿ ಲೈಫ್ ಜಾಕೆಟ್‌ಗಳನ್ನು ನಾಡದೋಣಿ ಮೀನುಗಾರರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ. ಎಲ್ಲಾ ಮೀನುಗಾರರಿಗೆ ಜೀವರಕ್ಷಕಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.<br><br>• ಮೀನುಗಾರರು ಮೀನುಗಾರಿಕೆಗೆ ತೆರಳುವ ದೋಣಿಗಳಲ್ಲಿ ಕಡ್ಡಾಯವಾಗಿ ಮೀನುಗಾರರ ಸಂಖ್ಯೆಗೆ ಅನುಗುಣವಾಗಿ ಜೀವ ರಕ್ಷಕ ಸಾಧನಗಳಾದ ಲೈಫ್‌ಜಾಕೆಟ್ ಮತ್ತು ಲೈಫ್ ಬಾಯ್ ಇರುವುದನ್ನು ಖಚಿತಪಡಿಸಿಕೊಂಡ ನಂತರವೇ ಮೀನುಗಾರಿಕೆ ಇಲಾಖೆಯು ಮೀನುಗಾರರಿಗೆ ಪರವಾನಗಿ ನೀಡುತ್ತಿದೆ.<br><br>• ಸೀಮೆಎಣ್ಣೆ ಪರವಾನಿಗೆ ಹಾಗೂ ಡೀಸೆಲ್ ಪಾಸುಪುಸ್ತಕ ವಿತರಿಸುವ ಸಮಯದಲ್ಲಿ ಜೀವರಕ್ಷಕ ಜಾಕೆಟ್‌ಗಳನ್ನು ಬೋಟುಗಳಲ್ಲಿ ಕಡ್ಡಾಯವಾಗಿ ಇರಿಸುವಂತೆ ದೋಣಿ ಮಾಲಕರಿಗೆ ಮಾಹಿತಿ ನೀಡಲಾಗಿರುತ್ತದೆ.<br><br>• ಭಾರತೀಯ ತಟ ರಕ್ಷಣಾ ಪಡೆ, ಕರಾವಳಿ ಕಾವಲು ಪೋಲೀಸ್ ಮತ್ತು ಮೀನುಗಾರಿಕೆ ಇಲಾಖೆ ಜಂಟಿಯಾಗಿ ಪ್ರತೀ ತಿಂಗಳು ಮೀನುಗಾರಿಕೆ ಹಳ್ಳಿಗಳಲ್ಲಿ (Community Interaction Programme) ಸಾರ್ವಜನಿಕಾ ತಿಳುವಳಿಕಾ ಕಾರ್ಯಕ್ರಮಗಳ ಮೂಲಕ ಹಮ್ಮಿಕೊಳ್ಳುತ್ತಿದ್ದು ಈ ಸಂದರ್ಭದಲ್ಲಿ ಮೀನುಗಾರರಿಗೆ ಸಮುದ್ರದಲ್ಲಿ ಜೀವರಕ್ಷಕ ಜಾಕೆಟ್‌ಗಳನ್ನು ಬಳಸುವ ಮಹತ್ವದ ಬಗ್ಗೆ ತಿಳಿಸಲಾಗುತ್ತಿರುತ್ತದೆ. |

ಸಂಖ್ಯೆ: ಪಸಂಮೀ ಇ-147 ಮೀಇಇ 2025

(ಮಂಕಾಳ್ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ರವರ ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ: 1038 ಕ್ಕೆ**

**ಅನುಬಂಧ – 1**

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ವರ್ಷ | | | | | ಒಟ್ಟು |
|---|---|---|---|---|---|---|---|---|
| | | | 2020-21 | 2021-22 | 2022-23 | 2023-24 | 2024-25 | |
| 1 | ದಕ್ಷಿಣ ಕನ್ನಡ | ಮಂಗಳೂರು | 11 | 3 | 4 | 4 | 2 | **24** |
| 2 | | ಮುಲ್ಕಿ | 0 | 2 | 0 | 0 | 0 | **2** |
| 3 | | ಉಳ್ಳಾಲ | 0 | 0 | 0 | 0 | 1 | **1** |
| 4 | | ಬಂಟ್ವಾಳ | 0 | 0 | 0 | 0 | 1 | **1** |
| | | **ಒಟ್ಟು** | **11** | **5** | **4** | **4** | **4** | **28** |
| 5 | ಉಡುಪಿ | ಉಡುಪಿ | 25 | 11 | 12 | 8 | 8 | **64** |
| 6 | | ಕುಂದಾಪುರ | 18 | 17 | 9 | 19 | 15 | **78** |
| | | **ಒಟ್ಟು** | **43** | **28** | **21** | **27** | **23** | **142** |
| 7 | ಉತ್ತರ ಕನ್ನಡ | ಕಾರವಾರ | 5 | 4 | 5 | 5 | 5 | **24** |
| 8 | | ಅಂಕೋಲಾ | 5 | 4 | 5 | 5 | 5 | **24** |
| 9 | | ಕುಮಟಾ | 5 | 4 | 5 | 3 | 5 | **22** |
| 10 | | ಹೊನ್ನಾವರ | 5 | 4 | 5 | 4 | 5 | **23** |
| 11 | | ಭಟ್ಕಳ | 5 | 4 | 5 | 6 | 5 | **25** |
| 12 | | ಯಲ್ಲಾಪುರ | 5 | 4 | 5 | 3 | 4 | **21** |
| | | **ಒಟ್ಟು** | **30** | **24** | **30** | **26** | **29** | **139** |
| | | **ಒಟ್ಟಾರೆ** | **84** | **57** | **55** | **57** | **56** | **309** |

ಮೀನುಗಾರಿಕೆ ನಿರ್ದೇಶಕರು.

13/8

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ರವರ ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ: 1038 ಕ್ಕೆ

## ಅನುಬಂಧ-2

## ರಾಜ್ಯ ಸರ್ಕಾರದ ಅನುದಾನದಿಂದ ರಾಜ್ಯದ 15 ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿ ಹೂಳೆತ್ತುವ ಕಾಮಗಾರಿಯ ಸಂಬಂಧ ಪೂರ್ವ ಅಧ್ಯಯನಗಳನ್ನು ಕೈಗೊಂಡಿರುವ ವಿವರ:

| ಕ್ರ.ಸಂ | ಕಾಮಗಾರಿಯ ಹೆಸರು |
|---|---|
| 1 | ಅಂಕೋಲ ತಾಲೂಕಿನ ಬೆಳಂಬಾರ ಮೀನುಗಾರಿಕೆ ಬಂದರಿನಲ್ಲಿ ಹೂಳೆತ್ತುವ ಕಾಮಗಾರಿ |
| 2 | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳ್ವೆದಂಡೆಯಲ್ಲಿ ಮೀನುಗಾರಿಕಾ ಜೆಟ್ಟಿಯ ನದಿ ಪಾತ್ರದಲ್ಲಿ, ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ |
| 3 | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳ್ವೆದಂಡೆಯಲ್ಲಿ ಶಶಿಹಿತ್ಲು ನದಿಯ ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ. |
| 4 | ಹೊನ್ನಾವರ ಮೀನುಗಾರಿಕೆ ಬಂದರಿನ ವಾರ್ಫ್ ಮುಂಭಾಗದಲ್ಲಿ ಹೂಳೆತ್ತುವ ಕಾಮಗಾರಿ |
| 5 | ಹೊನ್ನಾವರ ಮೀನುಗಾರಿಕೆ ಬಂದರಿನ ಅಪ್ರೋಚ್ ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ. |
| 6 | ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕುಮಲ್ಪೆ ಬೊಬರ್ಯಪಾದೆ ಜೆಟ್ಟಿಯಿಂದ ಅಳಿವೆ ತನಕ ಹೂಳೆತ್ತಲು ಬ್ಯಾತಿಮೆಟ್ರಿಕ್ ಸರ್ವೆ ಮಾಡುವುದು. |
| 7 | ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಕೋಡಿಬೆಂಗ್ರೆ ಜೆಟ್ಟಿ ಮುಂಭಾಗ ಮತ್ತು ಅಳಿವೆಯಲ್ಲಿ ಹೂಳೆತ್ತಲು ಬ್ಯಾತಿಮೆಟ್ರಿಕ್ ಸರ್ವೆ ಮಾಡುವುದು. |
| 8 | ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಕೋಡಿಕನ್ಯಾನ ಜೆಟ್ಟಿಯಿಂದ ಅಳಿವೆ ತನಕ ಹೂಳೆತ್ತಲು ಬ್ಯಾತಿಮೆಟ್ರಿಕ್ ಸರ್ವೆ ಮಾಡುವುದು. |
| 9 | ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕು ಶಿರೂರು ಅಳಿವೆಗದ್ದೆ ಜೆಟ್ಟಿಯಿಂದ ಅಳಿವೆ ತನಕ ಹೂಳೆತ್ತಲು ಬ್ಯಾತಿಮೆಟ್ರಿಕ್ ಸರ್ವೆ ಮಾಡುವುದು. |
| 10 | ಕೊಡೇರಿ ಮೀನುಗಾರಿಕೆ ಬಂದರಿನಲ್ಲಿ (Basin, channel and Breakwater) ಹೂಳೆತ್ತುವ ಕಾಮಗಾರಿ. |
| 11 | ದಕ್ಷಿಣ ಕನ್ನಡ ಜಿಲ್ಲೆಯ ಸಸಿಹಿತ್ಲು ಮೀನುಗಾರಿಕಾ ಜೆಟ್ಟಿಯ ಮುಂಭಾಗದಲ್ಲಿ ಜಲಮೋಜಣಿ ಸರ್ವೆ ಕಾಮಗಾರಿ |
| 12 | ಮಂಗಳೂರು ತಾಲೂಕಿನ ಬೋಳೂರು ಬೊಕ್ಕಪಟ್ನ ಮೀನುಗಾರಿಕಾ ಜೆಟ್ಟಿಯ ಮುಂಭಾಗದಲ್ಲಿ ಜಲಮೋಜಣಿ ಸರ್ವೆ ಕಾಮಗಾರಿ |
| 13 | ಮಂಗಳೂರು ಹಳೆ ಬಂದರಿ ನಿಂದ ಬೋಳೂರು ಬೊಕ್ಕಪಟ್ಟ ವರೆಗೆ ಜಲಮೋಜಣಿಸರ್ವೆ ನಡೆಸುವ ಕಾಮಗಾರಿ |
| 14 | ಮಂಗಳೂರು ಮೀನುಗಾರಿಕಾ ಬಂದರಿನ ಪ್ರದೇಶದಲ್ಲಿ ಜಲಮೋಜಣಿ ಸರ್ವೆ ಕಾಮಗಾರಿ |
| 15 | ಮಂಗಳೂರು ತಾಲೂಕಿನ ಉಳ್ಳಾಲ ಕೋಟೆಪುರ ಮೀನುಗಾರಿಕಾ ಜೆಟ್ಟಿಯ ಮುಂಭಾಗದಲ್ಲಿ ಜಲಮೋಜಣಿ ಸರ್ವೆ ಕಾಮಗಾರಿ. |

ಮೀನುಗಾರಿಕೆ ನಿರ್ದೇಶಕರು.

13/8 14/8